ಹೋಗುತ್ತಾ ಬರುತ್ತಿದ್ದ ವಾಹನಗಳ ತೀವ್ರ ಬೆಳಕು ಕಣ್ಣುಗಳನ್ನು ಕುರುಡು ಮಾಡಿತು. ಅರ್ಧ ಕಿ.ಮೀ. ದೂರದಲ್ಲಿದ್ದ ಕಾಕಾನ ಢಾಬಾಕ್ಕೆ ಹೋಗಿ ಬಿಸಿಬಿಸಿ ತಂದೂರಿ ಚಿಕನ್ ತಿನ್ನಲು ಮನಸ್ಸಾಯಿತು. ಮನೆಯಲ್ಲಿ ಜೀತರಾಮ ಚಿಕನ್ ತಯಾರಿಸಿದ್ದ. ಅಂಶುಲ್ ಬಹುಶಃ ಊಟ ಮಾಡಿದ್ದ. ಜೀತರಾಮ ನನಗೂ ಹೇಳಿದ್ದ, ಆದರೆ ನನಗೆ ಊಟ ಮಾಡಲು ಮನಸ್ಸಾಗಲಿಲ್ಲ.

ನಾನು ಮನೆಗೆ ಮರಳಿ ಬರುವವರೆಗೆ ಅವನು ರೊಟ್ಟಿಗಳನ್ನು ಮಾಡುವುದಿಲ್ಲ. ನನಗೆ ಅನೇಕ ವರ್ಷಗಳಿಂದ ಬಿಸಿಬಿಸಿ ರೊಟ್ಟಿಗಳನ್ನು ತಿನ್ನುವ ಅಭ್ಯಾಸವಿದೆ. ಅವನಿಗೂ ಬಿಸಿಬಿಸಿ ರೊಟ್ಟಿಗಳನ್ನು ನನಗಾಗಿ ಮಾಡುವ ಅಭ್ಯಾಸವಿದೆ.

ಹೈವೇ ದಾಟಲು ಹತ್ತು ನಿಮಿಷಗಳು ಹಿಡಿದವು. ಕಾಕಾನ ಡಾಬಾದಲ್ಲಿ ಎಂದಿನಂತೆ ಗುಂಪು, ಗದ್ದಲ ಮತ್ತು ನೂಕುನುಗ್ಗಾಟವಿತ್ತು. ಮಾಲೀಕ ನನ್ನನ್ನು ಗುರುತಿಸುತ್ತಿದ್ದ. ಅವನು ನನ್ನ ವಯಸ್ಸಿನವನೇ ಇರಬೇಕು. ನನ್ನ ವಯಸ್ಸು? ಎಲ್ಲರಿಗೂ ನನ್ನ ವಯಸ್ಸನ್ನು ತಿಳಿದುಕೊಳ್ಳುವ ಬಗ್ಗೆ ಯಾಕಿಷ್ಟು ಅವಸರವಿರುತ್ತದೆ? ನಾನು ಅಂಶುಲ್‌ನಂಥ ದೊಡ್ಡ ಮಗನ ಡ್ಯಾಡಿ ಎಂಬುದು ತಿಳಿದಿದೆ. ನನಗೆ ಮದುವೆಗೆ ಬಂದ ಮಗನಿದ್ದಾನೆ. ನನ್ನ ವಯಸ್ಸು ಮೂವತ್ತಾರು ಎಂದರೆ ನೀವು ನಂಬುವಿರಾ? ಆದರೆ ನನ್ನನ್ನು, ಎಪ್ಪತ್ತನ್ನು ದಾಟಿದವನು ಎಂದರೆ ನನಗೆ ಒಪ್ಪಿಗೆಯಿಲ್ಲ. ಅರವತ್ತು ಸಹ ಹೆಚ್ಚೇ ಎಂದು ಅನ್ನಿಸುತ್ತದೆ... ಸರಿ. ಅರವತ್ತು ಎಂದಿಟ್ಟುಕೊಳ್ಳೋಣ. ಇದಕ್ಕಿಂತ ಹೆಚ್ಚಿಲ್ಲ.

ಪಿಟ್ಟೂ ನನ್ನನ್ನು ನೋಡಿದೊಡನೆ ಒಂದು ಕುರ್ಚಿಯನ್ನು ಖಾಲಿ ಮಾಡಿಸಿದ. ನಾನೂ ಸಹ ಉತ್ಸಾಹದಿಂದ ಕೈಕುಲುಕುತ್ತಾ ಹೇಳಿದೆ, "ಏನ್ ಸಮಾಚಾರ ಪಿಟ್ಟೂ?"

"ಚೆನ್ನಾಗಿದ್ದೇನೆ ಸಾರ್, ನೀವು ಹೇಳಿ. ನೀವು ನನ್ನ ಹೆಸರನ್ನೇ ಮರೆತು ಬಿಡುತ್ತೀರ."

ಅನೇಕ ವರ್ಷಗಳ ಹಿಂದೆ ಅವನು ತನ್ನ ಹೆಸರನ್ನು ಪಿಟ್ಟೂ ಎಂದಿದ್ದ. ಸ್ನೇಹಿತರಾದ ನಾವು ಆಗ ಸೈಕಲ್ ಹೊಡೆಯುತ್ತಿದ್ದೆವು, ಅವನ ಹೆಸರು ಕೇಳಿ ನಕ್ಕೆವು. ಆದರೆ ಅವನು ವಿಚಿತ್ರ ಮನುಷ್ಯನಾಗಿದ್ದ. ಅವನು ಈ ಹಿಂದೆಯೇ ಡಾಬಾದಲ್ಲಿ ಕೆಲಸಕ್ಕೆ ಸೇರಿಕೊಂಡು ದಾಲ್ ಮಖನಿ ತಯಾರಿಸುವಲ್ಲಿ ಪಳಗಿದ್ದ.

ಜೀತರಾಮನನ್ನು ನನ್ನ ನೆರಳಿನಿಂದ ದೂರ ಓಡಿಸಿ ನಾನು ತಂದೂರಿ ಚಿಕನ್, ದಾಲ್ ಮಖನಿಯೊಂದಿಗೆ ಪರೋಟಾಕ್ಕೆ ಆರ್ಡರ್ ಮಾಡಿದೆ. ಟೇಬಲ್ ಹಾಕುವುದಕ್ಕೆ ಮೊದಲು ಪಿಟ್ಟೂ ನನ್ನ ಬಳಿಗೆ ಬಂದು ಕೂತ, "ಉದಯ್ ಅಣ್ಣಾ, ತುಂಬಾ ದಿನಗಳ ನಂತರ ಬಂದಿದ್ದೀರ. ನೀವು ಈ ನಗರವನ್ನೇ ಬಿಟ್ಟು ಬೇರೆ ಕಡೆಗೆ ಹೋದಿರಿ ಎಂದು ನನಗೆ ಅನ್ನಿಸಿತ್ತು."

"ನಾನೆಲ್ಲಿಗೆ ಹೋಗಲಿ ಪಿಟ್ಟೂ? ಇಲ್ಲಿಯೇ ಮನೆ ಕಟ್ಟಿಸಿದ್ದೇನೆ. ಇಲ್ಲಿಗೇ ಮರಳಿ ಬರಬೇಕಾಯ್ತು."

"ಮತ್ತೇನು ಸಮಾಚಾರ? ಮಗನಿಗೆ ಮದುವೆಯನ್ನು ಮಾಡಿದಿರ?"

ನನಗೆ ಆಶ್ಚರ್ಯವಾಯಿತು. ಮಗನ ಮದುವೆ ಇಲ್ಲಿಯೂ ಹಿಂಬಾಲಿಸುತ್ತಿದೆ. ನಾನು ಇಲ್ಲವೆಂಬಂತೆ ತಲೆಯಾಡಿಸಿ ಅವನಿಗೇ ಕೇಳಿದೆ, "ನಿನ್ನ ಮಕ್ಕಳು ಏನು ಮಾಡುತ್ತಿದ್ದಾರೆ, ಪಿಟ್ಟೂ?"

"ನಾನು ಅಜ್ಜನಾದೆ. ಹಿರಿಯವನು ಕಂಟ್ರಾಕ್ಟ್‌ಗಿರಿ ಮಾಡುತ್ತಿದ್ದಾನೆ. ಕಿರಿಯವನು ನನಗೆ ಸಹಾಯ ಮಾಡುತ್ತಾನೆ."

"ವಾಹ್, ಮದುವೆ ಹೇಗೆ ಮಾಡಿದೆ?"

ಅವನು ಒರಟನಂತೆ ನನ್ನ ಮುಖವನ್ನು ನೋಡುತ್ತಾ ಹೇಳಿದ, "ಮದುವೆ? ಎಲ್ಲರಿಗಾದಂತೆ ಅವನಿಗೂ ಆಯ್ತು. ನಾವು ಕನ್ಯೆಯ ಮನೆಗೆ ಹೋದೆವು. ಮಗ ಅವಳನ್ನು ನೋಡಿದ. ನನ್ನ ಹೆಂಡತಿ ಅವಳನ್ನು ಇಷ್ಟಪಟ್ಟಳು. ಅಷ್ಟೇ..."